ಕಥೆ




## ಪ್ರವೀಣ್ ಕುಮಾರ್ ಜಿ.

ಕಲೆ: ಎಸ್.ವಿ. ಹೂಗಾರ್


# ಜಾರುಬಂಡೆ

1

### ಸರ್ಕಾರದ ಮದ್ದುಮನೆ (ಆಸ್ಪತ್ರೆ)

'ತಗಂಡ್ ಹೋಗ್ಬುಡ್ರಿ' ಎಂದು ನಡೆಯಲತ್ತಿದ ಮಾಂಜುಗನ(ಡಾಕ್ಟರ್) ಕಾಲು ಹಿಡಿದುಕೊಂಡು ನಲವತ್ತರ ಅಂಜಿನೆಪ್ಪ ನೆಲದ ಮೇಲೆ ಮಂಡಿಯೂರಿ ಅಳಲತ್ತಿದ. ಬಿಳಿ ಬಣ್ಣ ಹೊಡೆಸಿಕೊಂಡಿದ್ದ ಕಬ್ಬಿಣದ ಮಂಚದ ಮೇಲಿನ ಹತ್ತಿಯ ಗಾದಿಗೆ, ನೀಲಿ ಬಣ್ಣದ ಬಟ್ಟೆಯನ್ನು ಹಾಸಿ, ಎಂಟು ಏಡಿನ(ವರ್ಷ) ಅಂಜಿನೆಪ್ಪನ ಮಗ ಕಿರಣನನ್ನು ಮಲಗಿಸಿದ್ದರು. ಇನ್ನೂ ಉಸಿರಾಡುತ್ತಿರುವ ಮಗನನ್ನು, 'ಕರ್ಕಂಡ್ ಹೋಗ್ರಿ' ಅನ್ನದೇ, 'ತಗಂಡ್ ಹೋಗ್ರೀ' ಎಂದ ಮಾಂಜುಗನ ಮಾತು ಅಂಜಿನೆಪ್ಪನನ್ನು ಮಣ್ಣು ಮಾಡಿತ್ತು. ಉಸಿರು ಇನ್ನೂ ಇದೆ, ಯಾಕೆ ಮರ್ಯಾದೆ ಕೊಡುತ್ತಿಲ್ಲ ಮೈಗೆ? ಮೂರು ದಿನಗಳಿಂದಲೂ ಮದ್ದಿನಮನೆಯ ಮಂಚದ ಮೇಲೆ ಒದ್ದಾಡುತ್ತಿರುವ ಕಿರಣನಿಗೆ ಸಿಕ್ಕಾಪಟ್ಟೆ ಕಿವಿ ನೋವು ಮತ್ತು ಬಲಗಣ್ಣಿನ ಬಾವು. ಮೊನ್ನೆ ಏಟು ಬಿದ್ದ ಕೊಂಚ ಹೊತ್ತಿನಲ್ಲೇ ಕಿರಣನನ್ನು ನೋಡಿದ್ದ ಊರಲ್ಲಿನ ಪ್ರಥಮ ಚಿಕಿತ್ಸಾ ಕೇಂದ್ರದ ಕಾಂಪೌಂಡರ್‌ನಿಂದ, 'ದೊಡ್ಡಾಸ್ಪತ್ರಿಗೆ ಕರ್ಕಂಡ್ ಹೋಗ್ರಿ' ಎನಿಸಿಕೊಂಡು ಬಂದಿದ್ದ. ಆ ಕಂಪಣದ(ಜಿಲ್ಲೆ) ದೊಡ್ಡ ಸರ್ಕಾರದ ಮದ್ದಿನಮನೆಯಲ್ಲಿ ಈಗ 'ಕೈ ಮುಗೀತಿನಿ ಸ್ವಾಮಿ, ಹಂಗನಬ್ಯಾಡ್ರಿ. ಹೊಲ ಐತೆ ಮಾರ್‍ತೀನಿ' ಎಂದು ಅಳುತ್ತಲೇ ಅಂಜಿನೆಪ್ಪ ಮಾಂಜುಗನನ್ನು ಹೋಗಲು ಬಿಡದೇ ತಡೆದಿದ್ದ. ಮಾಂಜುಗ, 'ಟೈಮ್ ಹೋಗ್ಬುಟತಪಾ. ದುಡ್ಡಿಂದ ಉಳಿಯಂಗಿಲ್ಲ' ಎಂದಿದ್ದಕ್ಕೆ, ಅಂಜಿನೆಪ್ಪನ ಕೈಗಳು ತಾವಾಗೇ ಸಡಿಲಗೊಂಡವು.

ಅಪ್ಪನ ಅಳುವಿನಿಂದ ಕಿರಣನಿಗೆ ಎಚ್ಚರವಾಗಿ ನೋವಿನಿಂದ ಚೀರಲತ್ತಿದ, ಅವನಿಗೆ ಹೊರಗಿನ ದನಿಗಳು ಏನೂ ಕೇಳಿಸುತ್ತಿರಲಿಲ್ಲ. ಬಲಗಣ್ಣಂತೂ ಮುಚ್ಚಿಕೊಂಡು ಕೆಲಸ ನಿಲ್ಲಿಸಿತ್ತು. ಕಿರಣನ ಚೀರಾಟದಿಂದ ಹತ್ತಾರು ಮಂಚಗಳ ಮಂದಿಯ ನೋವು ಹೆಚ್ಚಾಯಿತು. ಅಂಜಿನೆಪ್ಪ ಓಡಿ ಬಂದು ಮಗನ ಪಕ್ಕ ಕೂತ. ಕೆಲವೇ ಗಳಿಗೆಗಳಲ್ಲಿ ನರ್ಸ್ ಬಂದು ಸೂಜಿ ಚುಚ್ಚಿದ ಮೇಲೆ ಕಿರಣ ಎಲ್ಲಾ ಮರೆತವನಂತೆ ಮತ್ತೆ ಮಲಗಿದ.

2

### ಕಾಪುಗಮನೆ (ಪೊಲೀಸ್ ಸ್ಟೇಷನ್)

'ಲೋಫರ್ ಸೂಳ್ಯಾಮಗನೇ, ಇನ್ನೊಂದ್ಸಲ ಆಕಿ ತಂಟೀಗೆ ಹೋದ್ರೆಗಿನಾ ಸಾಯಿಸ್ಬುಡ್ತೀನಿ?' ಎಂದು ಬೂಟುಗಾಲಿನಿಂದ ಒದೆಯಲತ್ತಿದ ಮೂವತ್ತೆಂಟರ ಸಬ್‌ಇನ್ಸ್‌ಪೆಕ್ಟರ್ ಬಲರಾಮನ ಜೋರಿಗೆ, ಬಾಯಲ್ಲಿ ನೆತ್ತರು ಬರಿಸಿಕೊಂಡು ಅಳುತ್ತಿದ್ದ ಇಪ್ಪತ್ತೈದರ ಹುಡುಗ, ಮುಗಿಲು ಮುಟ್ಟುವಂತೆ ಅಳುತ್ತಿದ್ದ. ಐವತ್ತರ ರೈಟರ್‌ನ್ನು ಕರೆದು, 'ಈ ಸೂಳೇಮಗನ್ ಮ್ಯಾಲೆ, ಎಸ್‌ಸಿ ಹುಡ್ರುನ್ನ ಜಾತಿಯಿಂದ ಬೈದು, ಹೊಡ್ದ ಅಂತ ಕೇಸ್ ಹಾಕ್ರಿ. ಬಿದ್ದರ್ಲಿ ಜೈಲಾಗ' ಎಂದು ತನ್ನ ಕೋಣೆಗೆ ಹೋದ. ಸ್ಟೇಶನ್ನಿನ ಸಣ್ಣ ಸೆರೆಕೋಣೆಯಲ್ಲಿ ಹುಡುಗ, 'ಸಾರ್, ಆ ಹುಡ್ಗೀನೂ ನನ್ನ ಲವ್ ಮಾಡಾಕತ್ತಾಳ ಸಾರ್, ಆಕೀನೇ ಕೇಳ್ರಿ' ಎಂದು ಗುಂಡಿಗೆ ಕಿತ್ತು ಬರುವಂತೆ ಹೇಳಿದ. ರೈಟರ್, 'ನಿನ್ನುನ್ನ ಉಳ್ಸಲ್ಲ ಸಾವ್ಕರ್ರು' ಎಂದಾಗ 'ಏನಾನ ಮಾಡ್ಕೆಳ್ಲಿ ಸರ್'